<u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಅರವಿಂದ ಕುಮಾರ ಅರಳಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 936**

**ಉತ್ತರಿಸಬೇಕಾದ ದಿನಾಂಕ : 21.12.2021**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2018-19 ರಿಂದ 2021-22 ರವರೆಗೆ ರೈತರ ಸಾಲ ಮನ್ನಾ ಮಾಡಲಾಗಿದೆಯೇ; ಮಾಡಿದ್ದಲ್ಲಿ, ತಾಲ್ಲೂಕುವಾರು ಮಾಹಿತಿ ನೀಡುವುದು; | ಬೀದರ್ ಜಿಲ್ಲೆಯ ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ:10.07.2018ಕ್ಕೆ ಹೊರಬಾಕಿ ಹೊಂದಿರುವ ಸಾಲದಲ್ಲಿ ಕುಟುಂಬಕ್ಕೆ ರೂ.1.00 ಲಕ್ಷಗಳವರೆಗಿನ ಸಾಲವನ್ನು 2018-19 ರಲ್ಲಿ ಮನ್ನಾ ಮಾಡಿದ್ದು, ಈ ಯೋಜನೆಯಲ್ಲಿ ರೈತರ ಅರ್ಹತೆಯನ್ನು 2018-19 ರಿಂದ 2021-22 ರವರೆಗೆ ಗುರುತಿಸಲಾಗುತ್ತಿದೆ. ಪ್ರತೀ ವರ್ಷ ಪಡೆದ ಬೆಳೆಸಾಲವನ್ನು ಮನ್ನಾ ಮಾಡಿರುವುದಿಲ್ಲ. 2018-19 ನೇ ಸಾಲಿನ ಸಾಲಮನ್ನಾದ ತಾಲ್ಲೂಕವಾರು ವಿವರ ಈ ಕೆಳಗಿನಂತಿರುತ್ತದೆ. |

(ರೂ. ಕೋಟಿಗಳಲ್ಲಿ)

| ಕ್ರ.ಸಂ | ತಾಲ್ಲೂಕು | ರೈತರ ಸಂಖ್ಯೆ | ಸಾಲ ಮನ್ನಾ ಮೊತ್ತ |
|---|---|---|---|
| 1 | ಔರಾದ್ | 22580 | 92.20 |
| 2 | ಬಸವಕಲ್ಯಾಣ | 20656 | 80.52 |
| 3 | ಬಾಲ್ಕಿ | 26451 | 110.58 |
| 4 | ಬೀದರ್ | 16170 | 70.42 |
| 5 | ಹುಮನಾಬಾದ್ | 17726 | 77.29 |
| | ಒಟ್ಟು | 1,03,583 | 431.00 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | 2018-19 ರಿಂದ 2021-22 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿವಿಧ ಬ್ಯಾಂಕ್ ಗಳಲ್ಲಿ ರೈತರು ಎಷ್ಟು ಮೊತ್ತದ ಸಾಲ ಪಡೆದಿದ್ದಾರೆ; ಪಡೆದಿದ್ದಲ್ಲಿ, ಬ್ಯಾಂಕ್‌ವಾರು ವಿವರ ನೀಡುವುದು; | ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಮತ್ತು ಕಾಸ್ಕಾರ್ಡ್ ಬ್ಯಾಂಕ್ ಪಿಕಾರ್ಡ್ ಬ್ಯಾಂಕ್‌ಗಳ ಮೂಲಕ 2018-19 ರಿಂದ 2021-22 ನವೆಂಬರ್ ಅಂತ್ಯದ ವರೆಗೆ ವಿತರಿಸಿದ ಸಾಲದಲ್ಲಿ ರೈತರು ಪಡೆದಿರುವ ಕೃಷಿ ಸಾಲದ ವಿವರವನ್ನು ಈ ಕೆಳಗೆ ನೀಡಲಾಗಿದೆ. |

(ರೂ. ಕೋಟಿಗಳಲ್ಲಿ)

| ವರ್ಷ | ಡಿಸಿಸಿ ಬ್ಯಾಂಕಿನಿಂದ ನೀಡಿದ ಕೃಷಿ ಸಾಲದ ವಿವರ | | ಕಾಸ್ಕಾರ್ಡ್ ಬ್ಯಾಂಕಿನಿಂದ ನೀಡಿದ ಸಾಲದ ವಿವರ | |
|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2018-19 | 152592 | 792.61 | 734 | 10.56 |
| 2019-20 | 140382 | 734.20 | 700 | 10.11 |
| 2020-21 | 155850 | 861.75 | 340 | 10.02 |
| 2021-22 (ನವೆಂಬರ್ ಅಂತ್ಯಕ್ಕೆ) | 86636 | 362.41 | 0 | 0.00 |

| | | |
|---|---|---|
| ಇ) | ರೈತರ ಸಾಲ ಮನ್ನಾ ಮಾಡಲು ಸರ್ಕಾರದ ನಿಯಮವೇನು; ಯಾವ ಯಾವ ಬೆಳೆಗಳಿಗೆ ಸಾಲ ಮನ್ನಾ ಮಾಡಲಾಗಿದೆ ? | ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ:10.07.2018 ಕ್ಕೆ ಹೊರಬಾಕಿ ಹೊಂದಿರುವ ಸಾಲದಲ್ಲಿ ಕುಟುಂಬಕ್ಕೆ ರೂ.1.00 ಲಕ್ಷಗಳ ವರೆಗಿನ ಸಾಲವನ್ನು ಮನ್ನಾ ಲಾಭ ಪಡೆಯಲು 2018-19 ರಲ್ಲಿ ಈ ಕೆಳಕಂಡ ನಿಯಮಗಳನ್ನು ನಿಗದಿಪಡಿಸಲಾಗಿದೆ.<br>1. ದಿ:10.07.2018ಕ್ಕೆ ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲದ ಹೊರಬಾಕಿಯನ್ನು ಹೊಂದಿರಬೇಕು. ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆವಿಗೆ ಮನ್ನಾ ದೊರೆಯುತ್ತದೆ.<br>2. ಈ ಯೋಜನೆ ಕೆಳಕಂಡವರಿಗೆ ಅನ್ವಯವಾಗುವುದಿಲ್ಲ.<br>ರೂ.20,000 ಹೆಚ್ಚಿನ ವೇತನ/ಪಿಂಚಣಿ ಪಡೆಯುವ ನೌಕರರಿಗೆ<br>ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ<br>3. ದಿ.10-7-2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು.<br>4. ಒಬ್ಬ ರೈತನಿಗೆ ಒಂದು ಸಹಕಾರ ಸಂಘದಲ್ಲಿನ ಬೆಳೆ ಸಾಲ ಮಾತ್ರ ಮನ್ನಾ ಆಗುವುದು.<br>5. ದಿ:10-7-2018 ಕ್ಕೆ ಹೊರಬಾಕಿ ಸುಸ್ತಿ ಇದ್ದಲ್ಲಿ ಸುಸ್ತಿ ಸಾಲದ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ:31.07.2019 ರೊಳಗೆ ಪಾವತಿಸತಕ್ಕದ್ದು.<br><br>ರೈತನು ಭೂ ಮಾಲೀಕನಾಗಿದ್ದು ಬೆಳೆಯುವ/ಪಹಣಿಯಲ್ಲಿ ನಮುದಾಗಿರುವ ಎಲ್ಲಾ ಬಗೆಯ ಬೆಳೆಗಳಿಗೂ ಸಹ ಸಾಲ ಮನ್ನಾ ಮಾಡಲಾಗಿದೆ. |

**ಸಂಖ್ಯೆ: ಸಿಒ 376 ಸಿಎಲ್ಎಸ್ 2021**

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು